# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** ದಿನಾಂಕ: 13.02.2011

ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಇಂದು ಕುಮಾರಸ್ವಾಮಿ ಬಡಾವಣೆ ವಾರ್ಡ್ 181, ಚಿಕ್ಕಲ್ಲಸಂದ್ರ ವಾರ್ಡ್ 183, ವಿದ್ಯಾಪೀಠ ವಾರ್ಡ್ 164 ಮತ್ತು ಚಾಮರಾಜಪೇಟೆ ವಾರ್ಡ್ 140 ರಲ್ಲಿ ಬೆಳಿಗ್ಗೆ 6.30 ಗಂಟೆಗೆ ತಪಾಸಣೆ ಕೈಗೊಂಡು, ಸ್ವಚ್ಛತೆ, ರಸ್ತೆ, ಉದ್ಯಾನವನಗಳ ಅಭಿವೃದ್ಧಿ, ಮುಂತಾದವುಗಳನ್ನು ಪರಿಶೀಲಿಸಿ, ಈ ಕೆಳಕಂಡ ಪ್ರಮುಖ ತೀರ್ಮಾನಗಳನ್ನು ಕೈಗೊಂಡು ಅವುಗಳನ್ನು ಅನುಷ್ಠಾನಗೊಳಿಸಲು ಕೂಡಲೇ ಕಾರ್ಯೋನ್ಮುಖರಾಗುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಾರ್ಡ್ 181, ಕುಮಾರಸ್ವಾಮಿ ಬಡಾವಣೆಯಲ್ಲಿ ಸುಮಾರು ಏಳೂವರೆ ಎಕರೆಯಷ್ಟು ಖಾಲಿ ನಿವೇಶನವಿದ್ದು, ಇದನ್ನು ಪಾಲಿಕೆಯಿಂದ ಅಭಿವೃದ್ಧಿಪಡಿಸದೇ ಇರುವುದರಿಂದ ಸಾರ್ವಜನಿಕರು ಒತ್ತುವರಿ ಮಾಡಿಕೊಂಡು ದೇವಸ್ಥಾನಗಳನ್ನು ನಿರ್ಮಿಸುತ್ತಿದ್ದಾರೆ. ಈ ಕೂಡಲೇ ಇದಕ್ಕೆ ರಕ್ಷಣೆ ನೀಡಿ, ಪಾಲಿಕೆಯ ಆಸ್ತಿಯನ್ನು ಉಳಿಸಿಕೊಡಬೇಕೆಂದು ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಬಿ.ಹೆಚ್. ಸುರೇಶ್ ರವರು ಆಯುಕ್ತರಿಗೆ ತಿಳಿಸಿದ ಹಿನ್ನೆಲೆಯಲ್ಲಿ ಆಯುಕ್ತರು ಇಂದು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಇದೊಂದು ಬಹಳ ಪ್ರಮುಖ ಸ್ಥಳವಾಗಿದ್ದು, ಸ್ವಾಭಾವಿಕವಾದ ಕಲ್ಲುಬಂಡೆಗಳು, ಸಮತಟ್ಟಾದ ಸ್ಥಳ ಇರುವುದರಿಂದ ಇದನ್ನು ಸುಂದರ ತಾಣವನ್ನಾಗಿ ಪರಿವರ್ತಿಸಬೇಕು. ಯಾವುದೇ ಕಾರಣಕ್ಕೂ ಒತ್ತುವರಿಗೆ ಅವಕಾಶ ನೀಡಬಾರದು, ಈ ಕೂಡಲೇ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲು ವಲಯ ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಇದಕ್ಕೆ ಕನ್ಸಲ್‌ಟೆನ್ಸಿ ನೇಮಕ ಮಾಡಿ, ಒಂದು ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು ತೋಟಗಾರಿಕಾ ಅಧೀಕ್ಷಕರಿಗೆ ಸೂಚನೆ ನೀಡಿದರು. ಅದರಲ್ಲಿ ಪಾದಚಾರಿ ಮಾರ್ಗ, ಉದ್ಯಾನವನ, ಆಟದ ಮೈದಾನ, ಮಳೆ ನೀರು ಸಂಗ್ರಹಣೆ, ಆಸನಗಳ ವ್ಯವಸ್ಥೆ, ಮುಂತಾದವುಗಳು ಕೂಡಿರಬೇಕು ಮತ್ತು ಇದನ್ನು ಬಸವನಗುಡಿಯ ಕಹಳೆಬಂಡೆ ಉದ್ಯಾನವನದ ಮಾದರಿಯಲ್ಲಿ ಅಭಿವೃದ್ಧಿಯಾಗಬೇಕೆಂದು ತಿಳಿಸಿದರು. ಈಗಾಗಲೇ ಇದಕ್ಕೆ 72 ಲಕ್ಷ ರೂ.ಗಳನ್ನು ಕಾಯ್ದಿರಿಸಿರುವುದರಿಂದ ಆ ಹಣದಿಂದ ಕಾರ್ಯಾರಂಭ ಮಾಡಲು ಸೂಚಿಸಿದರು. ಅವಶ್ಯಕತೆಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುವುದೆಂದು ತಿಳಿಸಿದರು.

ವಾರ್ಡ್ 183 ರಲ್ಲಿ ಚಿಕ್ಕಲ್ಲಸಂದ್ರ, ಹನುಮಗಿರಿ ಮತ್ತು ರಾಘವೇಂದ್ರ ಬಡಾವಣೆಗಳಲ್ಲಿ ಸ್ವಚ್ಛತೆ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು. ಇದೊಂದು ರೆವಿನ್ಯೂ ಬಡಾವಣೆಯಾಗಿರುವುದರಿಂದ ಇಲ್ಲಿ ಸರಿಯಾದ ರಸ್ತೆಬದಿಯಲ್ಲಿ ಮೋರಿಗಳ ವ್ಯವಸ್ಥೆ ಇಲ್ಲದಿರುವುದರಿಂದ ಮಳೆಗಾಲದಲ್ಲಿ ನೀರು ರಸ್ತೆಯಲ್ಲಿ ನಿಂತು ರಸ್ತೆ ಹಾಳಾಗುತ್ತಿದೆ ಎಂದು ಪಾಲಿಕೆ ಸದಸ್ಯರು ತಿಳಿಸಿದರು. ಅದಕ್ಕೆ ಆಯುಕ್ತರು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿ, ಈ ವರ್ಷದ ವಾರ್ಡ್ ಅನುದಾನದಲ್ಲಿ ಅವಶ್ಯಕತೆ ಇರುವ ಕಡೆ ರಸ್ತೆ ಬದಿ ಮೋರಿಗಳನ್ನು ನಿರ್ಮಿಸಲು ಸೂಚನೆ ನೀಡಿದರು.

ಚಿಕ್ಕಲ್ಲಸಂದ್ರ ಮೊದಲನೇ ಮುಖ್ಯರಸ್ತೆಯಿಂದ ಬನಶಂಕರಿ ವರ್ತುಲ ರಸ್ತೆಗೆ ಹೋಗಿ ಸೇರಲು ಸರಿಯಾದ ಸಂಪರ್ಕ ಇಲ್ಲದೇ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಅದಕ್ಕೆ ಖಾಸಗಿ ಜಮೀನು ಸ್ವಾಧೀನಪಡಿಸಿಕೊಳ್ಳಬೇಕೆಂದು ಸ್ಥಳೀಯರು ಆಯುಕ್ತರಲ್ಲಿ ಕೇಳಿಕೊಂಡರು. ಆಯುಕ್ತರು ಸ್ಥಳದಲ್ಲಿದ್ದ ಜಮೀನು ಮಾಲೀಕರೊಂದಿಗೆ ಚರ್ಚೆ ಮಾಡಿ, ಕೂಡಲೇ ರಸ್ತೆ ಅಭಿವೃದ್ಧಿಗಾಗಿ ಜಮೀನು ಬಿಟ್ಟುಕೊಡಲು ಕೇಳಿಕೊಂಡರು. ಪಾಲಿಕೆಯಿಂದ ನಿಯಮದಂತೆ ಕೂಡಲೇ ಪರಿಹಾರ ನೀಡಲು ಸರಿಯಾದ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.

ತದನಂತರ ಆಯುಕ್ತರು ವಾರ್ಡ್ 164 ರಲ್ಲಿರುವ ಶ್ರೀನಿವಾಸನಗರದ ಡಾ|| ರಾಜ್‌ಕುಮಾರ್ ಕ್ರೀಡಾಂಗಣಕ್ಕೆ ಭೇಟಿ ನೀಡಿದರು. ಇಷ್ಟೊಂದು ವಿಶಾಲವಾದ ಆಟದ ಮೈದಾನದಲ್ಲಿ ಸರಿಯಾದ ನಿರ್ವಹಣೆ ಮಾಡುತ್ತಿಲ್ಲ ಮತ್ತು ಇಲ್ಲಿ ಶೌಚಾಲಯದ ವ್ಯವಸ್ಥೆ ಕಲ್ಪಿಸಲು ಪಾಲಿಕೆ ಸದಸ್ಯರಾದ ಶ್ರೀ ಎಂ.ವೆಂಕಟೇಶ್ ಮತ್ತು ಸ್ಥಳೀಯ ಶಾಸಕರಾದ ಶ್ರೀ ಎ.ಎಲ್. ರವಿಸುಬ್ರಮಣ್ಯ ರವರು ಆಯುಕ್ತರಿಗೆ ತಿಳಿಸಿದರು.

ಆಯುಕ್ತರು ಸಂಬಂಧಪಟ್ಟ ಅಭಿಯಂತರರಿಗೆ ತರಾಟೆ ತೆಗೆದುಕೊಂಡು ಶೌಚಾಲಯದ ವ್ಯವಸ್ಥೆ ಇಲ್ಲದೆ ಜನರು ಎಲ್ಲಾ ಕಡೆ ಗಲೀಜು ಮಾಡುತ್ತಿದ್ದಾರೆ. ಆಟಗಾರರು ಅದೇ ಸ್ಥಳದಲ್ಲಿ ಆಟವಾಡುವುದರಿಂದ ಖಾಯಿಲೆಗೆ ಗುರಿಯಾಗಬೇಕಾಗುತ್ತದೆ. ಈ ಅವ್ಯವಸ್ಥೆಯನ್ನು ಹೋಗಲಾಡಿಸಲು ಕೂಡಲೇ ಶೌಚಾಲಯ ನಿರ್ಮಾಣ ಕಾರ್ಯ ಪ್ರಾರಂಭಿಸಲು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಿದರು.

ವಾರ್ಡ್ 140, ಚಾಮರಾಜಪೇಟೆ ವಾರ್ಡ್‌ನ ಈದ್ಗಾ ಮೈದಾನದ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯವನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀ ಬಿ.ಹೆಚ್. ಸುರೇಶ್, ಶ್ರೀ ಬಿ.ಎಸ್. ವೆಂಕಟಸ್ವಾಮಿ ನಾಯ್ಡು, ಶ್ರೀ ಎಂ. ವೆಂಕಟೇಶ್, ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ.ವಿ. ಗಣೇಶ್ ಹಾಗೂ ಶಾಸಕರಾದ ಶ್ರೀ ಎ.ಎಲ್. ರವಿಸುಬ್ರಮಣ್ಯ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**